**ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ: ವಾದಿ ಪರವಾಗಿ ಶ್ರೀ ಎಸ್.ಎಮ್.ಕೆ. ವಕೀಲರಿಂದ:**

ನಾನು ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು, ಅದನ್ನು ನಾನೇ ವಾದಿ ಪರ ವಕೀಲರಿಗೆ ಹೇಳಿ ಬರೆಸಿರುತ್ತೇನೆ.

**ಪಾಟೀ ಸವಾಲು: ಪ್ರತಿವಾದಿಯರ ಪರ ಶ್ರೀ ಎನ್.ಸಿ.ಹೆಚ್. ವಕೀಲರಿಂದ:**

ವಾದಿ ಮತ್ತು ಪ್ರತಿವಾದಿಯರ ಅಜ್ಜ-ಅಜ್ಜಿಯ ಹೆಸರು ನನಗೆ ಗೊತ್ತಿಲ್ಲ. ವಾದಿ-ಪ್ರತಿವಾದಿಯರ ತಂದೆ ಹೆಸರು ಇಮಾಮ್ ಸಾಬ. ಇಮಾಮ್ ಸಾಬನ ಮಕ್ಕಳ ಹೆಸರೇನು ಎಂಬ ಪ್ರಶ್ನೆಗೆ ಸಾಕ್ಷಿ ದೌಲತಬೀ, ರಸೂಲಬೀ ಮತ್ತು ಇನ್ನೊಬ್ಬಳ ಹೆಸರು ಈಗ ನೆನಪಾಗುತ್ತಿಲ್ಲ ಎನ್ನುತ್ತಾರೆ. ನಿಮ್ಮನ್ನು ನ್ಯಾಯಾಲಯದಲ್ಲಿ ಸಾಕ್ಷಿ ಹೇಳುವಂತೆ ಯಾರು ಕರೆಸಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿ ನಿಡಗುಂದಾ ಗ್ರಾಮದವರು ಕರೆಸಿದ್ದಾರೆ ಎನ್ನುತ್ತಾರೆ. ನನ್ನನ್ನು ಕರೆಸಿದವರ ಹೆಸರು ಈಗ ನೆನಪಾಗುತ್ತಿಲ್ಲ. ನನ್ನನ್ನು ಕರೆಸಿರುವ ನಿಡಗುಂದಾ ಗ್ರಾಮದವರು ಅದೇ ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿ. ಸಾಕ್ಷಿ ಸ್ವ-ಇಚ್ಛೆಯಿಂದ ಯೆಡಗಾ ಗ್ರಾಮದಲ್ಲಿ ವಾಸವಿರುವವರು ಅಲ್ಲೆ ಇದ್ದಾರೆ ಎನ್ನುತ್ತಾರೆ.

ಇಮಾಮ್ ಸಾಬನ ಮಗಳಾದ 2 ನೇ ಪ್ರತಿವಾದಿ ರಸೂಲಬೀ ಮುಸ್ತಾಫ ಎಂಬಾತನನ್ನು ಮದುವೆ ಮಾಡಿಕೊಂಡು ಆಕೆಯ ತಂದೆಯ ಮನೆಯಾದ ಛತ್ರಸಾಲ ಗ್ರಾಮದಲ್ಲಿ ವಾಸವಿದ್ದಾಳೆ ಎಂದರೆ ಸರಿ. ಇಮಾಮ್ ಸಾಬ ಈಗ 3 ವರ್ಷಗಳ ಹಿಂದೆ ತೀರಿಕೊಂಡಿರುತ್ತಾನೆ. ಇಮಾಮ್ ಸಾಬನ ಹೆಂಡತಿ ಈಗ್ಗೆ 20-30 ವರ್ಷಗಳ ಹಿಂದೆ ತೀರಿಕೊಂಡಿದ್ದಾಳೆ ಎನ್ನುವುದು ಸರಿ. ವಾದಿಯನ್ನು ನಿಡಗುಂದಾ ಗ್ರಾಮಕ್ಕೆ ಕೊಟ್ಟು ಮತ್ತು 1 ನೇ ಪ್ರತಿವಾದಿಯನ್ನು ಯೆಡಗಾ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಲಾಗಿದೆ ಮತ್ತು ಸದರಿಯವರು ಮದುವೆಯಾದ ದಿನದಿಂದ ಅವರವರ ಗಂಡನ ಮನೆಯಲ್ಲೆ ವಾಸವಿದ್ದಾರೆ ಎಂದರೆ ಸರಿ. 2 ನೇ ಪ್ರತಿವಾದಿ ಮದುವೆಯಾದ ದಿನದಿಂದ ತನ್ನ ತಂದೆ ಮನೆಯಲ್ಲೆ ವಾಸವಿದ್ದಾಳೆ ಎಂದರೆ ಸರಿ. ಸಾಕ್ಷಿ ಸ್ವ-ಇಚ್ಛೆಯಿಂದ 2 ನೇ ಪ್ರತಿವಾದಿ ಯ ಗಂಡನನ್ನು ಮನೆ ಅಳಿಯನನ್ನಾಗಿ ಮಾಡಿಕೊಂಡಿದ್ದಾರೆ ಎನ್ನುತ್ತಾರೆ.

ಇಮಾಮ್ ಸಾಬನಿಗೆ ಎಲ್ಲಿಲ್ಲಿ, ಯಾವ ಸರ್ವೆ ನಂಬರನಲ್ಲಿ ಎಷ್ಟು ಜಮೀನು ಇತ್ತು ಎಂದು

ಗೊತ್ತೆ ಎಂಬ ಪ್ರಶ್ನೆಗೆ ಸಾಕ್ಷಿ ಛತ್ರಸಾಲ ಗ್ರಾಮದ ಸ.ನಂ.66 ರಲ್ಲಿ 3 ಎಕರೆ 3 ಗುಂಟೆ ಮತ್ತು ಸ.ನಂ.26 ರಲ್ಲಿ 1 ಎಕರೆ 2-3 ಗುಂಟೆ ಜಮೀನು ಇದೆ ಎನ್ನುತ್ತಾರೆ. ಸದರಿ ಹೊಲಗಳನ್ನು ಹೊರತುಪಡಿಸಿ ಇಮಾಮ್ ಸಾಬನಿಗೆ ಛತ್ರಸಾಲ ಗ್ರಾಮದಲ್ಲಿ ಒಂದು ಮನೆ ಇದೆ. ಸದರಿ ಮನೆ ಆತನ ಹಿರಿಯರಿಂದ ಬಂದಿತ್ತು ಎಂದರೆ ಸರಿ.

ಇಮಾಮ್ ಸಾಬ ತನ್ನ ಜೀವಿತಾವಧಿಯ ಕಡೆಯ 10-15 ವರ್ಷ ಅನಾರೋಗ್ಯದಿಂದ ಬಳಲುತ್ತಿದ್ದ ಮತ್ತು ಆತನನ್ನು 2 ನೇ ಪ್ರತಿವಾದಿ ಮತ್ತು ಆಕೆಯ ಗಂಡನೇ ನೋಡಿಕೊಂಡು ಆರೈಕೆ ಮಾಡಿರುತ್ತಾರೆಂದರೆ ಸರಿ. ತನ್ನ ಆರೈಕೆ ಮಾಡಿದ್ದರಿಂದ ಇಮಾಮ್ ಸಾಬ ತನ್ನ ಜೀವಿತಾವಧಿಯಲ್ಲಿ ದಾವಾ ಸ್ವತ್ತುಗಳನ್ನು 2 ನೇ ಪ್ರತಿವಾದಿಗೆ ಮೃತ್ಯು ಪತ್ರದ ಮೂಲಕ ಕೊಟ್ಟಿದ್ದ ಎನ್ನುವುದು ಸುಳ್ಳು. ಪ್ರತಿವಾದಿ ಪರ ವಕೀಲರು ಸಾಕ್ಷಿಯನ್ನು ಪುನಹಃ ಇಮಾಮ್ ಸಾಬ ಮೃತ್ಯು ಪತ್ರ ಬರೆದ ಬಗ್ಗೆ ನಿಮಗೆ ಗೊತ್ತೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಇಮಾಮ್ ಸಾಬ ಮೃತ್ಯು ಪತ್ರ ಬರೆದ ಬಗ್ಗೆ ನನಗೆ ಗೊತ್ತಿಲ್ಲದೆ ಇರುವುದರಿಂದ ಆತ ಮೃತ್ಯು ಬರೆದಿರುವುದೇ ಸುಳ್ಳು ಎಂದು ಹೇಗೆ ಹೇಳುತ್ತಿರಿ ಎಂಬ ಪ್ರಶ್ನೆಗೆ ಸಾಕ್ಷಿ ಇಮಾಮ್ ಸಾಬ ಮೃತ್ಯು ಪತ್ರ ಬರೆದಿರುವುದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ತನ್ನ ಆರೈಕೆ ಮಾಡಿದ್ದರಿಂದ ಇಮಾಮ್ ಸಾಬ ತನ್ನ ಜೀವಿತಾವಧಿಯಲ್ಲಿ ದಾವಾ ಸ್ವತ್ತುಗಳನ್ನು 2 ನೇ ಪ್ರತಿವಾದಿಗೆ ಮೃತ್ಯು ಪತ್ರದ ಮೂಲಕ ಕೊಟ್ಟಿದ್ದ ಎಂಬ ವಿಚಾರ ನನಗೆ ಗೊತ್ತಿದ್ದರು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಇಮಾಮ್ ಸಾಬ್ ಮೃತ್ಯು ಪತ್ರದ ಮೂಲಕ ದಾವಾ ಸ್ವತ್ತನ್ನು 2 ನೇ ಪ್ರತಿವಾದಿಗೆ ಕೊಟ್ಟಿದ್ದರಿಂದ ಸದರಿ ಸ್ವತ್ತಿನಲ್ಲಿ ವಾದಿ ಮತ್ತು 1 ನೇ ಪ್ರತಿವಾದಿಗೆ ಯಾವುದೇ ಹಕ್ಕು- ಅಧಿಕಾರ ಇಲ್ಲ ಎಂದು ಸೂಚಿಸಿದರೆ ಸಾಕ್ಷಿ ಇಮಾಮ್ ಸಾಬನಿಗೆ ಮೂರು ಜನ ಮಕ್ಕಳಿದ್ದು ಅವರೆಲ್ಲರಿಗೂ ಇಮಾಮ್ ಸಾಬನ ಆಸ್ತಿಯಲ್ಲಿ ಪಾಲು ಇದೆ ಎನ್ನುತ್ತಾರೆ.

ವಾದಿ ನನ್ನನ್ನು ಆಕೆಯ ಪರವಾಗಿ ಸಾಕ್ಷಿ ಹೇಳುವಂತೆ ನನಗೆ ಹಣ ಕೊಟ್ಟು ಈ ದಿನ ಕರೆದುಕೊಂಡು ಬಂದಿದ್ದು ಅದರಂತೆ ನಾನು ಈ ದಿನ ಅವಳ ಪರವಾಗಿ ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ವಾದಿಯೇ ನನ್ನ ಈ ದಿನದ ಖರ್ಚು ನೋಡಿಕೊಂಡಿದ್ದಾಳೆ ಎನ್ನುವುದು ಸರಿಯಲ್ಲ.

ನಾನು ಇದೇ ನ್ಯಾಯಾಲಯದಲ್ಲಿ 8-10 ಇತರೇ ಪ್ರಕರಣಗಳಲ್ಲಿ ಸಾಕ್ಷಿ ಹೇಳಲು ಬಂದಿದ್ದೆ ಎನ್ನುವುದು ಸರಿಯಲ್ಲ. ವಾದಿ-ಪ್ರತಿವಾದಿಯರ ಕುಟುಂಬದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರು ಸಹ ವಾದಿಯ ಮಾತು ಕೇಳಿಕೊಂಡು ಆಕೆಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**